3

# ಕ್ರಿಸ್ತನಲ್ಲಿ ಜೀವಂತ

*"ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ'' (ಎಫೆಸ 1:3).*

ಜಗತ್ತಿನ ಅನೇಕ ಸಂಸ್ಕೃತಿಗಳಲ್ಲಿ, ಮದುವೆಯಲ್ಲಿ ಮದುವೆಯ ಉಂಗುರವನ್ನು ಧರಿಸುವುದು ವಿವಾಹದಲ್ಲಿ ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯು ಒಬ್ಬರಿಗೊಬ್ಬರು ಸಮರ್ಪಿಸಿಕೊಳ್ಳುವದಕ್ಕೆ ಸಂಕೇತವಾಗಿರುತ್ತದೆ. ಈ ಸಮರ್ಪಣೆಯ ದೃಶ್ಯವಾದ ಸಂಕೇತವು ಚಿಕ್ಕದಾಗಿರುವುದು (ಮತ್ತು ಬಹಳ ಬೆಲೆಯುಳ್ಳದ್ದಾಗಿರುವುದು), ಆದರೆ ಅದರ ಅರ್ಥವು ಜೀವಾವಧಿ ವಾಗ್ದಾನವನ್ನು ಸಾಂಕೇತಿಸುವುದು. ಮದುವೆಯ ಈ ಚಿಕ್ಕ ಸಂಕೇತವು ಚಿಕ್ಕ ಸಂಗತಿಗಳು ಬಹಳ ಸಲ ಅತೀ ಮಹತ್ವದ ವಿಚಾರಗಳನ್ನು ಹೇಳುತ್ತವೆಂಬುದನ್ನು ಜ್ಞಾಪಕಕ್ಕೆ ತರುತ್ತದೆ.

ಹೊಸ ಒಡಂಬಡಿಕೆಯ "ಕ್ರಿಸ್ತನಲ್ಲಿ'' (in Christ) ಎಂಬ ಪದವು, ಹೆಚ್ಚಾದ ಸಮಯಗಳಲ್ಲಿ ಅಸ್ಪಷ್ಟವಾದ ಎರಡು ಪದಗಳ ಪದವು, ಯಾವಾಗಲೂ ಬಹಳ ಅರ್ಥಗರ್ಭಿತವಾದದ್ದಾಗಿರುತ್ತದೆ. ಪ್ರಭಾವವುಳ್ಳ ಆತ್ಮಿಕ ತತ್ವವನ್ನು ಕೊಡದೇ ಅದು ಎಂದೂ ಕಾಣಿಸಿಕೊಳ್ಳುವದಿಲ್ಲ. ಅದು ಹೀಗೆ ಪದಗಳನ್ನು ಒಳಗೊಂಡಿರಬಹುದು "ಕ್ರಿಸ್ತನಲ್ಲಿ'' (ರೋಮಾಪುರ 12:5), "ಕ್ರಿಸ್ತ ಯೇಸುವಿನಲ್ಲಿ'' (ರೋಮಾಪುರ 3:24), "ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ'' (ರೋಮಾಪುರ 8:39), "ಆತನಲ್ಲಿ'' (2 ಕೊರಿಂಥ 5:21), "ಕರ್ತನಾದ ಯೇಸುವಿನಲ್ಲಿ'' (ರೋಮಾಪುರ 14:14), "ಕರ್ತನಲ್ಲಿ'' (1 ಕೊರಿಂಥ 4:17), "ಆತನ ಕುಮಾರನಲ್ಲಿ'' (1 ಯೋಹಾನ 5:11), "ಯೇಸುವಿನಲ್ಲಿ'' (ಎಫೆಸ 4:21), "ಆತನೊಳಗೆ'' (ಎಫೆಸ 4:15), "ಯಾರಲ್ಲಿ'' (ಎಫೆಸ 2:21), "ಕರ್ತನಾದ ಯೇಸುಕ್ರಿಸ್ತನಲ್ಲಿ'' (2 ಥೆಸಲೊನೀಕ 3:12), "ಯೇಸುವಿನಲ್ಲಿ'' (1 ಥೆಸಲೊನೀಕ 4:14), ಇಲ್ಲವೇ "ಆತನ ಕುಮಾರನಾದ ಯೇಸು ಕ್ರಿಸ್ತನಲ್ಲಿ'' (1 ಯೋಹಾನ 5:20); ಆದರೆ ದೈವಜ್ಞಾನದ ಒಳಾರ್ಥಗಳನ್ನು ಕಡೆಗಣಿಸಲಾಗದು. ಅದು ಕ್ರಿಸ್ತನೊಂದಿಗೆ ಐಕ್ಯತೆಯನ್ನು, ಕ್ರಿಸ್ತನ ಆತ್ಮಿಕ ದೇಹದಲ್ಲಿ ವಾಸಿಸುವದನ್ನು ಸೂಚಿಸುತ್ತದೆ. ಆದುದರಿಂದ ನಾವು ಈ ಪದದ ಅನ್ವಯಿಸುವಿಕೆಗಳನ್ನು ಅಲಕ್ಷಿಸಿದರೆ, ದೇವರ ಯೋಜನೆಯಲ್ಲಿ ಸಭೆಯ ಅರ್ಥ ಮತ್ತು ಸ್ಥಳವನ್ನು ತಿಳಿದುಕೊಳ್ಳಲಾರೆವು.

"ಕ್ರಿಸ್ತನಲ್ಲಿ'' ಮತ್ತು "ಸಭೆಯಲ್ಲಿ'' ಎಂಬ ಎರಡು ಪದಗಳಿಗೆ ಹೊಸ ಒಡಂಬಡಿಕೆಯ ಬರಹಗಳಲ್ಲಿ ಮೂಲಾಂಶವಾಗಿ ಒಂದೇ ಅರ್ಥವಿದೆ. ಯೇಸುವು ಮಹಿಮಾ ಸ್ಥಿತಿಗೆ ಏರಿಸಲ್ಪಟ್ಟಿದ್ದರಬಗ್ಗೆ ಆತನ ಪಾದಗಳ ಕೆಳಗೆ ಎಲ್ಲವುಗಳೂ ಇಡಲ್ಪಟ್ಟಿದ್ದನ್ನು ಮತ್ತು "ಸಭೆಗೆ'' ಆತನು ಎಲ್ಲವುಗಳ ಮೇಲೆ ಶಿರಸ್ಸಾದುದನ್ನು ಒಪ್ಪಿಕೊಂಡು, ಪೌಲನು,

“ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ” (ಎಫೆಸ 1:22, 23) ಎಂದು ಬರೆದನು. ಪೌಲನ ಪ್ರಕಾರವಾಗಿ ಸಭೆಯು ಕ್ರಿಸ್ತನ ದೇಹವಾಗಿದೆ; ಹೀಗೆ “ಕ್ರಿಸ್ತನಲ್ಲಿ” ಇರುವುದು ಕ್ರಿಸ್ತನ ಸಭೆಯಲ್ಲಿ ಇರುವಂಥದ್ದಾಗಿರುತ್ತದೆ.

ಹೊಸ ಒಡಂಬಡಿಕೆಯಲ್ಲೆಲ್ಲಾ (ವಿಶೇಷವಾಗಿ ಪೌಲನ ಬರಹಗಳಲ್ಲಿ) “ಕ್ರಿಸ್ತನಲ್ಲಿ” ಎಂಬ ಪದವನ್ನು ಇಲ್ಲವೇ ಅದರ ಸಮಾಂತರ ಪದಗಳನ್ನು ಗುರುತಿಸುವಾಗ, ಸಭೆಯ ಮತ್ತು ಅದಕ್ಕೆ *ನಮ್ಮ* ಸಂಬಂಧದ ಆಶ್ಚರ್ಯಕರವಾದ ದೈವಜ್ಞಾನ ಶಾಸ್ತ್ರೀಯ ಅರ್ಥವನ್ನು ನೋಡುತ್ತೇವೆ.[1] ಅದರ ಜಾಗರೂಕತೆಯ ಯೋಚಿಸುವಿಕೆಯು ಆತನ ದೇಹದಲ್ಲಿ ನಮ್ಮವುಗಳಾಗಿರುವ ಆತ್ಮಿಕ ಆಶೀರ್ವಾದಗಳ ವೈಭವಗಳೊಂದಿಗೆ ಪ್ರಭಾವಬೀರುತ್ತದೆ. ಈ ಪದದ ಅರ್ಥವನ್ನು ತಿಳಿದುಕೊಳ್ಳದೆ, ಕ್ರಿಸ್ತನ ಸಭೆಯ ಸದಸ್ಯನಾಗಿರುವುದರ ಅರ್ಥವು ಯಾವುದು ಎಂಬುದರ ಬಗ್ಗೆ ಪರಿಶುದ್ಧ ಬರಹದ ದೃಷ್ಟಿಕೋನದ ನಿರೀಕ್ಷೆಯುಳ್ಳವರಾಗಿರಲಾರೆವು.

## ವಿಶೇಷ ಸೌಲಭ್ಯವುಳ್ಳ ಒಂದು ಸ್ಥಳ

ಮೊದಲನೆಯದಾಗಿ, “ಕ್ರಿಸ್ತನಲ್ಲಿ” ಎಂಬ ಪದವು ಕರ್ತನ ಸಭೆಯ ಸದಸ್ಯನಾಗಿರುವವರಿಗೆ ಒಳಪಟ್ಟಿರುವ ವಿಶೇಷ ಅಧಿಕಾರವನ್ನು ಸೂಚಿಸುತ್ತದೆ. “ಕ್ರಿಸ್ತನಲ್ಲಿ” ನಾವು ದೇವರಿಂದ ಆಯ್ಕೆ ಮಾಡಲ್ಪಟ್ಟಿದ್ದೇವೆ.

ಎಫೆಸ 1:3-14ರಲ್ಲಿಯ ವಿಸ್ತರಿಸಲ್ಪಟ್ಟ ಸ್ತುತಿಗೀತದಲ್ಲಿ, ಪೌಲನು “ಕ್ರಿಸ್ತನಲ್ಲಿ” ಇರುವವರನ್ನು ತನ್ನ ಆಯ್ದುಕೊಂಡವರನ್ನಾಗಿ ಮಾಡಿಕೊಂಡದ್ದಕ್ಕಾಗಿ ದೇವರನ್ನು ಕೊಂಡಾಡುತ್ತಾನೆ:

> ಹೇಗಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು. ಈ ಕೃಪಾದಾನವು ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು (ಎಫೆಸ 1:4-6).

ರಕ್ಷಿಸಲ್ಪಡಲು ಒಬ್ಬನನ್ನು ಮತ್ತು ತಪ್ಪಿಹೋಗಲು ಒಬ್ಬನನ್ನು ಆಯ್ಕೆ ಮಾಡಿಕೊಳ್ಳುವದನ್ನು, ವ್ಯಕ್ತಿಗಳ ಆಯ್ಕೆಯ ಪೂರ್ವ ಸಂಕಲ್ಪವನ್ನು ಕುರಿತು ಪೌಲನು ಬರೆಯುತ್ತಿರುವದಿಲ್ಲ. ಕ್ರಿಸ್ತನೊಳಗೆ ಬರುವ ಎಲ್ಲರನ್ನೂ ಆತನಲ್ಲಿ ನಂಬಿಗಸ್ತಿಕೆಯಿಂದ ನೆಲೆಗೊಳ್ಳುವ ಎಲ್ಲರನ್ನೂ ರಕ್ಷಿಸಲು ದೇವರ ಅದ್ಭುತಕರವಾದ ತೀರ್ಮಾನದ ಆಯ್ಕೆಯನ್ನು ಅವನು ತೋರಿಸುತ್ತಿದ್ದಾನೆ. ಜಗದುತ್ಪತ್ತಿಗೆ ಮೊದಲು, ದೇವರು, ಕ್ರಿಸ್ತನ ದೇಹವು ವಿಶೇಷ ಅಧಿಕಾರವುಳ್ಳ ಸ್ಥಳವಾಗಿರುವುದು ಎಂದು ಆಯ್ದುಕೊಂಡನು. ಕ್ರಿಸ್ತನ ದೇಹದಲ್ಲಿ ಬರುವವರನ್ನು ತನ್ನ ಮಕ್ಕಳಂತೆ ಸ್ವೀಕರಿಸಿಕೊಳ್ಳುವದನ್ನು ಆಯ್ದುಕೊಂಡನು.

ಈ ದೈವಿಕ ಆಯ್ಕೆಯು ಮನುಷ್ಯನ ಆಯ್ಕೆಯ ಸ್ವಾತಂತ್ರದೊಂದಿಗೆ ವಿರುದ್ಧವಾಗಿರುವದಿಲ್ಲ. ಆದರೆ, ಇದು ಮನುಷ್ಯನಿಗೆ ಆಯ್ಕೆಮಾಡಲ್ಪಟ್ಟವರ ಮಧ್ಯದಲ್ಲಿರಲು ಆಯ್ಕೆ

ಮಾಡುವದಕ್ಕೆ ಸ್ವಾತಂತ್ರ್ಯವನ್ನು ಕೊಡುವದು. ಕ್ರಿಸ್ತನ ದೇಹವನ್ನು ರಕ್ಷಿಸುವದನ್ನು ದೇವರು ಆಗಲೇ ಆಯ್ದುಕೊಂಡಿರುವನು; ಆದರೆ ಮನುಷ್ಯನು ಆ ದೇಹದಲ್ಲಿ ಬರುವದನ್ನು ಆಯ್ಕೆ ಮಾಡಿಕೊಳ್ಳಬೇಕು; ಮತ್ತು ಅದರಲ್ಲಿ ಉಳಿದು ಕೊಳ್ಳುವದನ್ನು ಆಯ್ಕೆ ಮಾಡಿಕೊಳ್ಳಬೇಕು.

ದೇವರು ನೋಹನಿಗೆ ರಕ್ಷಿಸಲ್ಪಡಲು ಒಂದು ಸ್ಥಳವನ್ನು ಆಯ್ಕೆ ಮಾಡಿದನು (ಆದಿಕಾಂಡ 7:1), ಆದರೆ ನೋಹನು ಮತ್ತು ಅವನ ಕುಟುಂಬವು ಅದನ್ನು ಪ್ರವೇಶಿಸಿ, ಅಲ್ಲಿ ಇರಬೇಕಾಗಿತ್ತು (ಆದಿಕಾಂಡ 7:7). ನಾವೆಯು ನೋಹನಿಗಾಗಿ ಮತ್ತು ಅವನ ಕುಟುಂಬಕ್ಕಾಗಿ ವಿಶೇಷ ಹಕ್ಕುಳ್ಳ ಸ್ಥಳವಾಗಿತ್ತು. ಭೂಲೋಕದ ಎಲ್ಲಾ ಜನರಲ್ಲಿ ನೋಹ ಮತ್ತು ಅವನ ಹೆಂಡತಿ, ಗಂಡು ಮಕ್ಕಳು ಮತ್ತು ಸೊಸೆಯಂದಿರು, *ನಾವೆಯಲ್ಲಿ* ಇದ್ದವರು ದೇವರು ಆಯ್ದುಕೊಂಡ ಜನಾಂಗವಾಗಿದ್ದರು - ಅವರು ದೇವರ ಕೃಪೆಯಿಂದ ಮತ್ತು ಜೊಪಾಸನೆಯಿಂದ ಕಾಪಾಡಲ್ಪಡುತ್ತಿದ್ದರು ಮತ್ತು ಒದಗಿಸಲ್ಪಟ್ಟರು.

*ನಾವು* ಪರಲೋಕಕ್ಕೆ ಹೋಗುವಾಗ, ಪ್ರವೇಶ ದ್ವಾರದ ಬಳಿಯಲ್ಲಿ ಒಂದು ದೊಡ್ಡ ಸಂಕೇತದ ಬೋರ್ಡನ್ನು ನಾವು ನೋಡುವೆವೆಂದು ಯಾರೋ ಒಬ್ಬರು ಹೇಳಿದ್ದಾರೆ. ಆ ಬೋರ್ಡಿನ ಎದುರು ಮುಖದ ಮೇಲೆ "ನನ್ನ ಬಳಿಗೆ ಬನ್ನಿರಿ" ಎಂದು ಬರೆದ ಮಾತುಗಳು ಇರುವವು. ನಾವು ಪರಲೋಕವನ್ನು ಪ್ರವೇಶಿಸುವಂತೆ ಆ ಮಾತುಗಳನ್ನು ಓದುವೆವು ಮತ್ತು ರಕ್ಷಣೆಗಾಗಿ ತನ್ನ ಬಳಿಗೆ ಬರಲು ಕರ್ತನ ಆಮಂತ್ರಣದ ಬಗ್ಗೆ ಯೋಚಿಸುವೆವು ಮತ್ತು ಆ ಆಮಂತ್ರಣಕ್ಕೆ ಉತ್ತರ ಕೊಡಲು ದೇವರು ಪ್ರತಿಯೊಬ್ಬನಿಗೆ ಕೊಟ್ಟ ಆಯ್ಕೆಯನ್ನು ಕುರಿತು ಯೋಚಿಸುವೆವು. ಪರಲೋಕದಲ್ಲಿ ಪ್ರವೇಶಿಸಿದ ನಂತರ, ಬೋರ್ಡಿನ ಹಿಂಭಾಗದಲ್ಲಿ ಬರೆದದ್ದನ್ನು ಓದಲು ತಿರುಗಿಕೊಳ್ಳುವೆವು: ಅಲ್ಲಿ, "ದೇವರಿಂದ ಆಯ್ಕೆ ಮಾಡಲ್ಪಟ್ಟವರು" ಎಂದು ಬರೆದಿರುವುದು. ಆಗ ನಾವು ಕ್ರಿಸ್ತನ ದೇಹವನ್ನು ರಕ್ಷಿಸಲು ಜಗದುತ್ಪತ್ತಿಗಿಂತ ಮೊದಲು ದೇವರು ಮಾಡಿದ ಆಯ್ಕೆಯನ್ನು ಮತ್ತು ಆ ದೇಹವನ್ನು ಪ್ರವೇಶಿಸಿ ಅದರಲ್ಲಿ ಉಳಿದುಕೊಂಡ ಎಲ್ಲರ ಮೇಲೆ ದೇವರು ದಯಪಾಲಿಸಿದ ಹೋಲಿಸಲಾಗದ ಸದವಕಾಶವನ್ನು ಕುರಿತು ಯೋಚಿಸುತ್ತೇವೆ.

ಕ್ರಿಸ್ತನ ದೇಹವನ್ನು, ಸಭೆಯನ್ನು ಪ್ರವೇಶಿಸುವವನು, ವಿಶೇಷ ಅಧಿಕಾರವುಳ್ಳ ಸ್ಥಳವನ್ನು, ದೈವಿಕ ಆಯ್ಕೆಯ ಸ್ಥಳವನ್ನು ಪ್ರವೇಶಿಸುವನು. ನಾವು ದೇವರ ಮಕ್ಕಳು ಆಗಿರುವೆವೋ ಇಲ್ಲವೋ ಎಂಬುದು ಒಂದು ಅವಕಾಶದ ಸಂಗತಿಯಾಗಿರುವದಿಲ್ಲ, ಆದರೆ ಆಯ್ಕೆಯ ಸಂಗತಿಯಾಗಿರುತ್ತದೆ. ದೇವರು ರಕ್ಷಣೆಯ ಸ್ಥಳವನ್ನು ಆಯ್ಕೆಮಾಡಿದ್ದಾನೆ, ಆದರೆ ನಾವು ಆ ಸ್ಥಳದೊಳಗೆ ಪ್ರವೇಶಿಸಿ, ಅಲ್ಲಿ ಇರುವದನ್ನು ಆಯ್ಕೆ ಮಾಡಿಕೊಳ್ಳ ತಕ್ಕದ್ದು. ಕ್ರಿಸ್ತನ ದೇಹದಲ್ಲಿ ಪ್ರವೇಶಿಸುವದನ್ನು ನಾವು ಆಯ್ಕೆ ಮಾಡಿಕೊಳ್ಳುವಾಗ, ದೇವರು ತನ್ನ ವಾಗ್ದಾನಗಳಿಗನುಸಾರವಾಗಿ ನಮ್ಮನ್ನು ತನ್ನ ಮಕ್ಕಳನ್ನಾಗಿ ಹಾಗೂ ಬಾಧ್ಯಸ್ಥರನ್ನಾಗಿ ಆಯ್ಕೆ ಮಾಡಿಕೊಳ್ಳುವನು.

## ಒದಗಿಸುವಿಕೆಯ ಒಂದು ಸ್ಥಳ

"ಕ್ರಿಸ್ತನಲ್ಲಿ" ಇರುವ ವ್ಯಕ್ತಿಯು ವಿಶೇಷ ಅಧಿಕಾರವುಳ್ಳ ಸ್ಥಳದಲ್ಲಿರುವುದಲ್ಲದೇ, ದೇವರ ಎಲ್ಲಾ ವಿಪುಲವಾದ ಆತ್ಮಿಕ ಒದಗಿಸುವಿಕೆಗಳ ಲಭ್ಯತೆಯನ್ನು ಹೊಂದಿರುವನು. ಕ್ರಿಸ್ತನ ದೇಹವು "ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆಸ 1:23) ಎಂದು ಪೌಲನು ಬರೆದನು. "ಆತನಲ್ಲಿ ತನ್ನ ಸರ್ವ ಸಂಪೂರ್ಣತೆಯು ವಾಸವಾಗಿರಬೇಕೆಂಬುದು" ದೇವರ ಒಳ್ಳೇ ಚಿತ್ತವೆಂದು

ಪೌಲನು ಬರೆದನು (ಕೊಲೊಸ್ಸೆ 1:19). ಆದುದರಿಂದ, "ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ" (ಕೊಲೊಸ್ಸೆ 2:10) ಎಂದು ಅವನು ಹೇಳಬಲ್ಲವನಾದನು.

ನಮಗಾಗಿ ದೇವರು ಒದಗಿಸುವ ಪ್ರತಿಯೊಂದು ಆತ್ಮಿಕ ಆಶೀರ್ವಾದವು "ಕ್ರಿಸ್ತನಲ್ಲಿ" ಕಂಡು ಬರುತ್ತದೆ. ಎಫೆಸ 1ರಲ್ಲಿ ಪೌಲನು ತನ್ನ ಸ್ತುತಿಗೀತವನ್ನು ಪ್ರಾರಂಭಿಸುವಂತೆ, ಅವನು ಒಂದೇ ವಾಕ್ಯದೊಂದಿಗೆ ಕ್ರಿಸ್ತನಲ್ಲಿ ನಮಗಾಗಿ ದೇವರು ಮಾಡಿದ್ದನ್ನು ಸಾರಾಂಶವಾಗಿ ಹೇಳಿದನು: "ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ" (ಎಫೆಸ 1:3). ಪೌಲನ "ಸಕಲ" ಎಂಬುದು ಎಲ್ಲವನ್ನೂ ಒಳಗೊಂಡದ್ದಾಗಿರುತ್ತದೆ. ಹೀಗಿದ್ದರೂ, ಯಾವುದೇ ವ್ಯಕ್ತಿಯು ಕ್ರಿಸ್ತನಲ್ಲಿ ಬಂದು, ಆತನಲ್ಲಿ ನೆಲೆಗೊಳ್ಳದಿದ್ದರೆ ವಿಪುಲವಾದ, ದೇವರ ಆತ್ಮಿಕ ಒದಗಿಸಿಕೊಡುವಿಕೆಗಳನ್ನು ಸ್ವೀಕರಿಸಿಕೊಳ್ಳಲಾರನು.

"ಕ್ರಿಸ್ತನಲ್ಲಿ" ನಮಗೆ ಲಭ್ಯವಾಗಿರುವ ಆಶೀರ್ವಾದಗಳ ಬಗ್ಗೆ ಯೋಚಿಸಿರಿ. ಮೊದಲನೆಯದಾಗಿ, "ಕ್ರಿಸ್ತನಲ್ಲಿ" *ರಕ್ಷಣೆಯನ್ನು* ಕುರಿತು ನಮಗೆ ಆಶೀರ್ವಾದ ಗಳಿರುವವು. "ಆತನಲ್ಲಿ" ನಮಗೆ ಕ್ಷಮಾಪಣೆಯಿರುವುದು: "ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ" (ಎಫೆಸ 1:7). "ಕ್ರಿಸ್ತನಲ್ಲಿ" ನಾವು ನೂತನ ಜೀವಿಗಳಾಗಿದ್ದೇವೆ: "ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನ ವಾಯಿತು" (2 ಕೊರಿಂಥ 5:17). "ಯೇಸು ಕ್ರಿಸ್ತನಲ್ಲಿ" ನಮಗೆ ನಿತ್ಯಜೀವವಿರುವುದು: "ಆದಕಾರಣ ದೇವರಾರಿಸಿಕೊಂಡವರು ನನ್ನ ಕೂಡ ಕ್ರಿಸ್ತಯೇಸುವಿನಲ್ಲಿರುವ ರಕ್ಷಣೆಯನ್ನು ನಿತ್ಯ ಪ್ರಭಾವ ಸಹಿತವಾಗಿ ಹೊಂದಬೇಕೆಂದು ನಾನು ಅವರಿಗೋಸ್ಕರ ಎಲ್ಲವನ್ನೂ ತಾಳಿಕೊಳ್ಳುತ್ತೇನೆ" (2 ತಿಮೊಥೆ 2:10).

ಎರಡನೆಯದಾಗಿ, "ಕ್ರಿಸ್ತನಲ್ಲಿ" ನಮಗೆ *ಪುತ್ರತ್ವವನ್ನು* ಕುರಿತು ಆಶೀರ್ವಾದಗಳಿರುತ್ತವೆ. "ಕ್ರಿಸ್ತ ಯೇಸುವಿನಲ್ಲಿ" ತಂದೆಯ ಕಡೆಗೆ ನಮಗೆ ಪೂರ್ಣ ಪ್ರವೇಶವಿರುತ್ತದೆ: "ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ"; "ಆತನ ಮೂಲಕ ನಾವೂ ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ಮಾರ್ಗವಾಯಿತು" (ಎಫೆಸ 2:13, 18). "ಆತನಲ್ಲಿ" ನಮಗೆ ಒಂದು ನಿತ್ಯವಾದ ಬಾಧ್ಯಸ್ಥಿಕೆಯಿರುವುದು: "... ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆಮಾಡಿಕೊಂಡಿದ್ದನು. ಅದೇನಂದರೆ ಭೂಪರಲೋಕಗಳಲ್ಲಿ ಇರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದೇ" (ಎಫೆಸ 1:10, 11).

ಮೂರನೆಯದಾಗಿ, "ಕ್ರಿಸ್ತನಲ್ಲಿ" ನಮಗೆ *ಭದ್ರತೆಯನ್ನು* ಕುರಿತು ಆಶೀರ್ವಾದಗಳು ಇರುತ್ತವೆ. "ಆತನಲ್ಲಿ" ನಾವು ಪರಿಶುದ್ಧಾತ್ಮನಿಂದ ಮುದ್ರಿಸಲ್ಪಟ್ಟಿರುತ್ತೇವೆ: "ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪರಿಶುದ್ಧಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ" (ಎಫೆಸ 1:13). "ಕ್ರಿಸ್ತನಲ್ಲಿ" ನಾವು ಅಪರಾಧ ನಿರ್ಣಯದಿಂದ ಸ್ವತಂತ್ರರಾಗಿದ್ದೇವೆ: "ಆದದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ" (ರೋಮಾಪುರ 8:1).

ಪರಲೋಕದಲ್ಲಿಯ ನಮ್ಮ ತಂದೆಯು ಕ್ರಿಸ್ತನ ದೇಹವನ್ನು ಎಲ್ಲಾ ಆತ್ಮಿಕ ಆಶೀರ್ವಾದಗಳ ಸ್ಥಳವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾನೆ. ಆ ದೇಹವನ್ನು ಪ್ರವೇಶಿಸುವವರು ಮತ್ತು ಅದರಲ್ಲಿ ವಾಸಿಸುವವರು ಮಾತ್ರವೇ ಆತನ ಉದಾರವಾದ ಸಮೃದ್ಧಿಗಳನ್ನು ಹೊಂದಿಕೊಳ್ಳುವರು.

ಈ ಹಳೆ ಒಡಂಬಡಿಕೆಯ ಉದಾಹರಣೆಯನ್ನು ಯೋಚಿಸಿರಿ. ಇಸ್ರಾಯೇಲು ಐಗುಪ್ತವನ್ನು ಬಿಟ್ಟು ವಾಗ್ದತ್ತ ದೇಶವಾದ ಕಾನಾನಿಗೆ ಪ್ರಯಾಣಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದೆ. ಮೊದಲನೆಯ ಪಸ್ಕ ಹಬ್ಬವು ಆಚರಿಸಲ್ಪಡುತ್ತಲಿದೆ. ಪಸ್ಕದ ಕುರಿಯ ರಕ್ತವನ್ನು ಇಸ್ರಾಯೇಲ್ಯರು ತಮ್ಮ ಬಾಗಿಲಿನ ಎರಡೂ ಪಟ್ಟಿಗಳಿಗೂ ಮೇಲಿನ ಪಟ್ಟಿಗೂ ಹಚ್ಚಬೇಕೆಂದೂ ಪಸ್ಕಾಹಬ್ಬದ ಸಾಯಂಕಾಲ ತಮ್ಮ ಮನೆಗಳೊಳಗೆ ಇರಬೇಕೆಂದು ದೇವರು ಅವರಿಗೆ ನಿರ್ದೇಶಿಸಿದ್ದನು (ವಿಮೋಚನಕಾಂಡ 12:22). ಈ ನಿರ್ದೇಶನವನ್ನು ಕೈಕೊಳ್ಳದವರು, ದೇವರು ದಾಟಿಹೋಗುವಾಗ, ತಮ್ಮ ಚೊಚ್ಚಲ ಮಕ್ಕಳನ್ನು ಮರಣದಲ್ಲಿ ಕಳೆದುಕೊಳ್ಳುವರು. ಬರಲಿಕ್ಕಿದ್ದ ಆ ಐತಿಹಾಸಿಕ ಸಾಯಂಕಾಲವು ಎಷ್ಟು ಗಂಭೀರವಾದದ್ದಾಗಿತ್ತು! ಪ್ರತಿಯೊಂದು ಇಸ್ರಾಯೇಲ ಕುಟುಂಬವು ಇಡೀ ರಾತ್ರಿ ಭಯಭಕ್ತಿಯಿಂದ ಎಚ್ಚರವಾಗಿರಬೇಕಾಗಿತ್ತು. ಸಾಯಂಕಾಲ ಪ್ರಾರಂಭವಾಗುವದಕ್ಕಿಂತ ಸ್ವಲ್ಪ ಮೊದಲು, ಒಬ್ಬ ಹಿರೀ ಮಗನು ತನ್ನ ತಂದೆಗೆ, "ಅಪ್ಪಾ, ಬಾಗಿಲಿನ ಪಟ್ಟಿಗಳಿಗೆ, ನಿಲುವು ಪಟ್ಟಿಗೆ ರಕ್ತವು ಹಚ್ಚಲ್ಪಟ್ಟಿದ್ದರ ಬಗ್ಗೆ ನಿನಗೆ ನಿಶ್ಚಿತತೆ ಇದೆಯೋ?" ಎಂದು ಕೇಳುವದನ್ನು ಕಲ್ಪಿಸಿಕೊಳ್ಳಿರಿ. "ಹೌದು ಮಗನೇ, ಅದನ್ನು ನಾನೇ ಮಾಡಿದ್ದೇನೆ. ಅದನ್ನು ಆಗಲೇ ಮಾಡಲಾಗಿದೆ" ಎಂದು ತಂದೆ ಉತ್ತರ ಕೊಡುತ್ತಾನೆ. ಸ್ವಲ್ಪ ಸಮಯದ ನಂತರ, ಮಗನು ಪುನಃ ಕೇಳುತ್ತಾನೆ. "ಅಪ್ಪಾ, ನೀನು ಸರಿಯಾಗಿ ಮಾಡಿರುವಿಯೆಂದು ನಾವು ಪರೀಕ್ಷಿಸಬೇಕೆಂದು ನೀನು ಯೋಚಿಸುವುದಿಲ್ಲವೋ? ಸಾಯಂಕಾಲ ಕೂಡಲೇ ಪ್ರಾರಂಭವಾಗುತ್ತದೆ ಮತ್ತು ನಾವು ಮನೆಯೊಳಗೆ ಉಳಿಯ ಬೇಕಾಗುತ್ತದೆ. ಹಾಗೂ ಇನ್ನು ಮೇಲೆ ಅದನ್ನು ಪರೀಕ್ಷಿಸಲಿಕ್ಕೆ ಆಗುವುದೇ ಇಲ್ಲ." "ಸರಿ, ನಾನು ಪರೀಕ್ಷಿಸುತ್ತೇನೆ ಮತ್ತು ಪ್ರತಿಯೊಂದೂ ಯೋಗ್ಯವಾಗಿ ಮಾಡಲ್ಪಟ್ಟಿರುವದನ್ನು ದೃಢಪಡಿಸಿಕೊಳ್ಳುತ್ತೇನೆ" ಎಂದು ತಂದೆಯು ಹೇಳುತ್ತಾನೆ. ತಂದೆಯು ಪರೀಕ್ಷಿಸುತ್ತಾನೆ ಮತ್ತು ಮನೆಯ ಬಾಗಿಲಿನ ಎರಡೂ ಪಟ್ಟಿಗಳಿಗೂ ನಿಲುವು ಪಟ್ಟಿಗೂ ದೇವರು ನಿರ್ದೇಶಿಸಿದಂತೆ ರಕ್ತ ಹಚ್ಚಿರುವದನ್ನು ದೃಢಪಡಿಸಿಕೊಳ್ಳುತ್ತಾನೆ. ಈ ಭರವಸೆಯೊಂದಿಗೆ ತನ್ನ ಮಗನನ್ನು ಆದರಿಸಲು ತಂದೆಯು ಹಿಂದಿರುಗುತ್ತಾನೆ: "ನನ್ನ ಮಗನೇ, ಎಲ್ಲವೂ ಚೆನ್ನಾಗಿದೆ. ದೇವರ ನಿರ್ದೇಶನಗಳನ್ನು ನಾವು ಅನುಸರಿಸಿದ್ದೇವೆ ದೇವರ ಚಿತ್ತದಲ್ಲಿ ನೀನು ಸುರಕ್ಷಿತನಾಗಿರುವಿ."

ಆ ತಂದೆಯು ತನ್ನ ಮಗನಿಗೆ ಭರವಸೆ ಕೊಡಬಲ್ಲನು ಯಾಕಂದರೆ ಅವರು ದೇವರ ನಿರ್ದೇಶನಗಳ ವೃತ್ತದೊಳಗೆ ಜೀವಿಸುತ್ತಿದ್ದರು. ಹಾಗೆಯೇ, "ಕ್ರಿಸ್ತನಲ್ಲಿ" ನಾವು ದೇವರ ಚಿತ್ತದ ವಲಯದೊಳಗೆ ಇರುತ್ತೇವೆ. ನಮ್ಮ ತಂದೆಯು ನಾವು ಆತನ ಕುಮಾರನಲ್ಲಿ ನಂಬಿಗಸ್ತಿಕೆಯಿಂದ ವಾಸಿಸಿರುವ ವರೆಗೆ ನಮ್ಮ ಎಲ್ಲಾ ಆತ್ಮಿಕ ಅಗತ್ಯತೆಗಳನ್ನು ಪೂರೈಸುವನು.

## ವಾಗ್ದಾನದ ಒಂದು ಸ್ಥಳ

ಮೂರನೆಯದು, ಭವಿಷ್ಯಕ್ಕಾಗಿ ಒಂದೇ ನಿರೀಕ್ಷೆಯು "ಕ್ರಿಸ್ತನಲ್ಲಿ" ಇರುವುದು. ಈ ಜೀವನಕ್ಕಾಗಿ ನಿಜವಾದ, ತಪ್ಪು ಮಾಡದ ಮಾರ್ಗದರ್ಶಿಯಂತೆ ಮಾನವ ಜ್ಞಾನವು

ಸೋತು ಹೋಗುವುದು, ಆದರೆ "ಜ್ಞಾನವಿದ್ಯಾ ಸಂಬಂಧವಾದ ಎಲ್ಲಾ ನಿಕ್ಷೇಪಗಳು" ಕ್ರಿಸ್ತನಲ್ಲಿ ಅಡಗಿಸಿ ಇಡಲ್ಪಟ್ಟಿರುವವು (ಕೊಲೊಸ್ಸೆ 2:3). ಈ ಜಗತ್ತು ನಾಶಕ್ಕಾಗಿ ಇಡಲ್ಪಟ್ಟಿದೆ (2 ಪೇತ್ರ 3:10). ಆದುದರಿಂದ, ಈ ಜಗತ್ತಿನ ಮೇಲೆ ಆಸರೆಯಾದ ಯಾವುದೇ ನಿರೀಕ್ಷೆಯು ಅಂತಿಮವಾಗಿ ಅಳಿದು ಹೋಗುವುದು. ಆದರೆ "ಕ್ರಿಸ್ತನಲ್ಲಿ" ನಮಗೆ ನಿತ್ಯವಾದ, ಬಾಡಿಹೋಗದ ಸ್ವಾಸ್ಥ್ಯವು ಇರುವುದು (ಎಫೆಸ 1:11).

ಕ್ರಿಸ್ತನಲ್ಲಿಯ ನಮ್ಮ ನಿರೀಕ್ಷೆಯನ್ನು ಕುರಿತು ಯೋಹಾನನು ಹೀಗೆ ಬರೆದನು, "ಆ ಸಾಕ್ಷಿ ಯಾವದಂದರೆ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ" (1 ಯೋಹಾನ 5:11). ಈ ನಿತ್ಯ ಜೀವವು ಎರಡು ಮಾರ್ಗಗಳಲ್ಲಿ ನಮಗೆ ಬರುತ್ತದೆ: ಈ ಲೋಕದಲ್ಲಿ ಸಮೃದ್ಧ ಜೀವನದಂತೆ ಮತ್ತು ಬರಲಿಕ್ಕಿದ್ದ ಲೋಕದಲ್ಲಿ ನಿತ್ಯ ಜೀವದಂತೆ ಕ್ರಿಸ್ತನಲ್ಲಿ ನಮಗೆ ಈ ಜೀವನದಲ್ಲಿ ನಿರೀಕ್ಷೆ ಮತ್ತು ಬರಲಿಕ್ಕಿದ್ದ ಜೀವಕ್ಕಾಗಿ ನಿರೀಕ್ಷೆ ಇರುವುದು - ಈಗ ಸಮೃದ್ಧ ಜೀವನ ಮತ್ತು ಪರಲೋಕದಲ್ಲಿ ನಿತ್ಯಜೀವ ಇರುವುದು. "ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" (ಯೋಹಾನ 10:10ಬಿ) ಎಂದು ಯೇಸು ಹೇಳಿದನು. "ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ" (1 ಯೋಹಾನ 5:12) ಎಂದು ಯೋಹಾನನು ಹೇಳಿದನು. ಯೋಹಾನನು ಇನ್ನೂ ಹೀಗೆಂದು ಬರೆದನು, "ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ" (1 ಯೋಹಾನ 5:13).

ಹಳೆ ಒಡಂಬಡಿಕೆಯ ನಿಯಮದ ಅಧೀನತೆಯಲ್ಲಿ ಒಬ್ಬನು ಯಾರನ್ನಾದರೂ ಆಕಸ್ಮಿಕವಾಗಿ ಕೊಂದರೆ, ತನ್ನ ಸಂಬಂಧಿಕನ ಮರಣಕ್ಕೆ ಪ್ರತೀಕಾರ ಮಾಡಲು ಹುಡುಕುವ, "ರಕ್ತಕ್ಕೆ ಮುಯ್ಯಿ ತೀರಿಸುವವನು" ಎಂದು ಕರೆಯಲ್ಪಡುವವನಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ರಕ್ಷಿಸಲ್ಪಡಲು ಆಶ್ರಯಪಟ್ಟಣಕ್ಕೆ ಓಡಿ ಹೋಗಬಹುದಿತ್ತು (ಯೆಹೋಶುವ 20). ಆಶ್ರಯ ಪಟ್ಟಣದೊಳಗೆ ಅವನು ಉಳಿದು ಕೊಂಡಿರುವ ವರೆಗೆ, ಅವನು ಕಾಪಾಡಲ್ಪಡುತ್ತಿದ್ದನು. ಆ ಪಟ್ಟಣದಲ್ಲಿ ಅವನಿಗೆ ಸಾಮಾನ್ಯ ಜೀವಿತ ಮತ್ತು ಸಾಮಾನ್ಯ ಭವಿಷ್ಯ ಇರುತ್ತಿತ್ತು. ಅವನು ಪಟ್ಟಣವನ್ನು ಬಿಟ್ಟು ಹೋದರೆ, ರಕ್ತಕ್ಕೆ ಪ್ರತೀಕಾರ ತೆಗೆದು ಕೊಳ್ಳುವವನಿಂದ ಸತತವಾಗಿ ಹುಡುಕಲ್ಪಡಬಹುದು ಮತ್ತು ಬಹುಶಃ ಅವನಿಂದ ಕೊಲ್ಲಲ್ಪಡಬಹುದು. ಆಶ್ರಯ ಪಟ್ಟಣದಲ್ಲಿ ಮಾತ್ರವೇ ಅವನಿಗೆ ಜೀವವೂ ಭವಿಷ್ಯವೂ ಇತ್ತು.

ಅದರಂತೆಯೇ, ನಮ್ಮ ಒಂದೇ ನಿರೀಕ್ಷೆಯು "ಕ್ರಿಸ್ತನಲ್ಲಿ" ಇರುತ್ತದೆ. ಆತನಿಂದ ಹೊರಗೆ ಈ ಜಗತ್ತಿನಲ್ಲಿ ಸಮೃದ್ಧ ಜೀವಿತಕ್ಕೆ ನಮಗೆ ಅಗತ್ಯವಾದವುಗಳು ಇರುವದಿಲ್ಲ ಇಲ್ಲವೇ ನಿತ್ಯತ್ವಕ್ಕಾಗಿ ನಿರೀಕ್ಷೆಯನ್ನು ಹೊಂದಿಕೊಳ್ಳಲಾರೆವು. ಕ್ರಿಸ್ತನಿಂದ ಬೇರೆಯಾಗಿರುವ ಅನ್ಯರು ಜಗತ್ತಿನಲ್ಲಿ ನಿರೀಕ್ಷೆಯಿಲ್ಲದವರಾಗಿರುವರು ಎಂದು ಪೌಲನು ಹೇಳುತ್ತಾನೆ (ಎಫೆಸ 2:12). ಹಾಗೆಯೇ, ಕ್ರಿಸ್ತನ ಹೊರಗೆ ಇರುವವನ ಈ ಜಗತ್ತಿನಲ್ಲಿ ನಿರೀಕ್ಷೆಯಿಲ್ಲದವನಾಗಿರುವನು.

## ಮುಕ್ತಾಯ

"ಕ್ರಿಸ್ತನಲ್ಲಿ" ಎಂಬ ಪದದ ಮಹತ್ವದ ಬೆಳಕಿನಲ್ಲಿ "ನಾವು ಕ್ರಿಸ್ತನಲ್ಲಿ ಹೇಗೆ ಬರುವೆವು?"

ಎಂದು ಕೇಳದೇ ಇರುವುದು ಹುಚ್ಚುತನವಾಗಿದೆ. ನಮ್ಮ ಪ್ರಶ್ನೆಗೆ ಎರಡು ವಾಕ್ಯಭಾಗಗಳು ಉತ್ತರ ಕೊಡುತ್ತವೆ. ಹೊಸ ಒಡಂಬಡಿಕೆಯ ಬಾಪ್ತಿಸ್ಮದ ಮುಖಾಂತರ ನಾವು ಕ್ರಿಸ್ತನೊಳಗೆ ತರಲ್ಪಡುತ್ತೇವೆ ಎಂದು ಪೌಲನು ರೋಮಾಪುರ 6:3ರಲ್ಲಿ ಹೇಳಿದ್ದು ಮೊದಲನೆಯದು: "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" ಎರಡನೆಯದು, ಗಲಾತ್ಯ 3:27ರಲ್ಲಿ ಪೌಲನು ಅದೇ ಸತ್ಯವನ್ನು ನಮಗೆ ಕೊಟ್ಟನು: "ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ."

ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ, ಪಾಪದ ಜೀವಿತಕ್ಕೆ ಮಾನಸಾಂತರಪಟ್ಟು, ದೇವರ ಕಡೆಗೆ ತಿರುಗಿಕೊಳ್ಳುವಾಗ, ಯೇಸುವು ಕ್ರಿಸ್ತನಾಗಿದ್ದಾನೆಂದು ಅರಿಕೆ ಮಾಡುವಾಗ ಮತ್ತು ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಮಾಡಿಸಿಕೊಳ್ಳುವಾಗ, ದೇವರ ಕೃಪಾಪೂರ್ಣವಾದ ಕೃತ್ಯದಿಂದ ಕ್ರಿಸ್ತನಲ್ಲಿ ತರಲ್ಪಡುವೆವು. ನಮ್ಮ *ಸ್ಥಾನವು* ಕೂಡಲೇ ಬದಲಾಯಿಸಲ್ಪಡುವುದು. ಯಾಕಂದರೆ ನಾವು ಅವಕಾಶದ, ಒದಗಿಸುವಿಕೆಗಳ ಮತ್ತು ವಾಗ್ದಾನದ ಸ್ಥಳದೊಳಗೆ ಕೂಡಲೇ ಬದಲಾಯಿಸಲ್ಪಡುವೆವು. ದೇವರ ವಾಕ್ಯದ ಸೇವನೆಯಿಂದಲೂ, ಕ್ರಿಸ್ತನ ಮತ್ತು ದೇವರ ಕುಟುಂಬದ ಅನ್ಯೋನ್ಯತೆಯಿಂದಲೂ ಹಾಗೂ ಬೆಳಕಿನಲ್ಲಿ ನಡೆಯುವದರಿಂದಲೂ ಅನುದಿನವೂ *ನಮ್ಮ ಸ್ಥಿತಿಯು* ಸತತವಾಗಿ ಬದಲಾಗುತ್ತ ಹೋಗುವುದು,

ಒಂದು ಸಭಾಪಂಗಡ ಸಭೆಯು ತನ್ನ ಸೊತ್ತಿನ ಸ್ಥಳದಲ್ಲಿ ಎಣ್ಣೆಯನ್ನು ಕಂಡುಕೊಂಡದ್ದರ ಬಗ್ಗೆ ನಾನು ಓದಿದ್ದೇನೆ. ಎಣ್ಣೆಯು ರಭಸದಿಂದ ಬಂದದ್ದರಿಂದ, ಸಭೆಯು ಕೂಡಲೇ ಬಹಳ ಐಶ್ವರ್ಯವುಳ್ಳದ್ದಾಯಿತು. ಅವರು ಕೂಡಲೇ ಸದಸ್ಯತ್ವವನ್ನು ರದ್ದು ಪಡಿಸಿಕೊಂಡು ಸದಸ್ಯರೊಳಗೆ ತಿಂಗಳಿನ ಲಾಭವನ್ನು ಹಂಚಿಕೊಳ್ಳಲು ತೀರ್ಮಾನಿಸಿ ಕೊಂಡರು. ಈ ಸಭೆಯು ಕೂಡಲೇ ಒಂದು ವ್ಯಾಪಾರವಾಯಿತು ಮತ್ತು ಅದರಲ್ಲಿದ್ದವರಿಗೆ ದೊಡ್ಡ ಪ್ರಾಪಂಚಿಕ ಐಶ್ವರ್ಯಗಳನ್ನು ತಂದಿತು.

ಹೊಸ ಒಡಂಬಡಿಕೆಯ ಸಭೆಯು ಈ ಸಭಾಪಂಗಡಕ್ಕಿಂತ ಮತ್ತು ಇತರ ಎಲ್ಲಾ ಸಭಾಪಂಗಡಗಳಿಗಿಂತ ಬಹಳ ಭಿನ್ನವಾಗಿರುವುದು. ಅದು ಕ್ರಿಸ್ತನ ಆತ್ಮಿಕ ದೇಹವಾಗಿದ್ದು, ಪರಲೋಕದ ಐಶ್ವರ್ಯಗಳಿಂದ ತುಂಬಿಕೊಂಡಿತ್ತು. ಸದಸ್ಯತ್ವವು ಎಂದಿಗೂ ಮುಗಿದು ಹೋಗುವದಿಲ್ಲ. ಸುವಾರ್ತೆಗೆ ವಿಧೇಯನಾಗುವವನು ಅದನ್ನು ಪ್ರವೇಶಿಸಬಹುದು ಮತ್ತು ದೇವರ ಸಮೃದ್ಧಿಯಲ್ಲಿ ಪಾಲು ಹೊಂದಬಹುದು. ಪ್ರತಿಯೊಬ್ಬ ಸದಸ್ಯನಿಗೆ ಯೇಸು ಕ್ರಿಸ್ತನ ಮುಖಾಂತರವಾಗಿ ಆತ್ಮನಿಂದ ಎಲ್ಲಾ ಸಮಯಗಳಲ್ಲಿ ಎಲ್ಲಾ ಆತ್ಮಿಕ ಆಶೀರ್ವಾದಗಳು ಲಭ್ಯವಿರುವವು. ಆತ್ಮಿಕ ನಿಧಿಗಳ ಎಂದೂ ತೀರದ ಒದಿಸುವಿಕೆಗಾಗಿ ಪರಲೋಕದ ಬ್ಯಾಂಕ್ ಮುಚ್ಚಿರುವದನ್ನು ಇಲ್ಲವೇ ಒದಗಿಸಲು ಅಶಕ್ತವಾದದನ್ನು ಯಾರೂ ಎಂದೂ ಕಂಡುಕೊಳ್ಳುವುದಿಲ್ಲ.

ಕ್ರಿಸ್ತನಲ್ಲಿರುವ ವ್ಯಕ್ತಿಗೆ ದೇವರ ಮಗುವಾಗುವ ಭಾಗ್ಯವಿರುವದರಿಂದ, ಅದಕ್ಕೆ ಎಲ್ಲಾ ಆತ್ಮಿಕ ಆಶೀರ್ವಾದಗಳಿರುವವು ಮತ್ತು ನಿತ್ಯಜೀವದ ನಿರೀಕ್ಷೆಯಿರುವುದು "ನೀನು ಕ್ರಿಸ್ತನಲ್ಲಿ ಇರುವಿಯೋ?" ಎಂಬುದಕ್ಕಿಂತ ಯಾವುದೇ ಹೆಚ್ಚಿನ ಪ್ರಶ್ನೆಯು ನಮಗೆ ಕೇಳಲ್ಪಡುವುದಿಲ್ಲ.

ಟಿಪ್ಪಣಿ

[1]ಅನುಬಂಧ 3, ಹೊಸ ಒಡಂಬಡಿಕೆಯಲ್ಲಿ ಕಂಡು ಬರುವ "ಕ್ರಿಸ್ತನಲ್ಲಿ" ಎಂಬ ಪದದ ಹಾಗೂ ಅದರ ಸಮಾಂತರ ಪದಗಳನ್ನು ಒಳಗೊಂಡಿರುತ್ತದೆ. ಸಭೆಯ ಅರ್ಥಕ್ಕಾಗಿ ಈ ಪದದ ಅಗಾಧವಾದ ಅನ್ವಯವನ್ನು ಯೋಚಿಸಲು ಮತ್ತು ಉಪಯೋಗಿಸಲು ಜಾಗರೂಕತೆಯ ಅಧ್ಯಯನಕ್ಕೆ ಈ ಯಾದಿಯೂ ಸಹಾಯ ಮಾಡುತ್ತದೆ.

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಹೊಸ ಒಡಂಬಡಿಕೆಯಲ್ಲಿ ಕಂಡು ಬರುವ "ಕ್ರಿಸ್ತನಲ್ಲಿ" ಎಂಬ ಪದದ ಭಿನ್ನವಾದ ಮಾರ್ಗಗಳನ್ನು ಯಾದಿ ಮಾಡಿರಿ.
2. "ಕ್ರಿಸ್ತನಲ್ಲಿ" ಮತ್ತು "ಸಭೆಯಲ್ಲಿ" ಎಂಬ ಪದಗಳನ್ನು ಹೋಲಿಸಿರಿ.
3. ಪೌಲನು ಎಫೆಸ 1:4-6ರಲ್ಲಿ ಬರೆದ ಪೂರ್ವ ಸಂಕಲ್ಪವನ್ನು ವಿವರಿಸಿರಿ.
4. ಪೂರ್ವ ಸಂಕಲ್ಪ ತತ್ವವನ್ನು ನೋಹನಿಗೂ ಅವನ ಕುಟುಂಬಕ್ಕೂ ಮತ್ತು ಜಳಪ್ರಳಯಕ್ಕೂ ಸಂಬಂಧಿಸಿರಿ.
5. "ಕ್ರಿಸ್ತನಲ್ಲಿ" ನಮಗಿರುವ ಕೆಲವು ಪ್ರಮುಖ ಆಶೀರ್ವಾದಗಳನ್ನು ಯಾದಿ ಮಾಡಿ, ಪ್ರತಿಯೊಂದನ್ನು ಸಂಕ್ಷೇಪವಾಗಿ ವಿವರಿಸಿರಿ.
6. "ಸಮೃದ್ಧ ಜೀವನವನ್ನು" "ನಿತ್ಯ ಜೀವಕ್ಕೆ" ಸಂಬಂಧಿಸಿರಿ.
7. ಹಳೆ ಒಡಂಬಡಿಕೆಯ ಕಾಲದಲ್ಲಿಯ ಆಶ್ರಯ ಪಟ್ಟಣಗಳನ್ನೂ ಅವುಗಳ ಕಾರ್ಯವನ್ನೂ ವಿವರಿಸಿರಿ.
8. "ಕ್ರಿಸ್ತನಲ್ಲಿ" ಇರುವವರೊಂದಿಗೆ ಸಂಬಂಧಿಸಿ ಎಫೆಸ 2:12ನ್ನು ವಿವರಿಸಿರಿ.
9. ಕ್ರಿಸ್ತನೊಳಗೆ ಪ್ರವೇಶಿಸುವದರ ಬಗ್ಗೆ ರೋಮಾಪುರ 6:3 ಏನನ್ನು ಹೇಳುತ್ತದೆ?
10. ಕ್ರಿಸ್ತನೊಳಗೆ ಪ್ರವೇಶಿಸುವದರ ಬಗ್ಗೆ ಗಲಾತ್ಯ 3:27 ಏನನ್ನು ಹೇಳುತ್ತದೆ?
11. ಕ್ರಿಸ್ತನಲ್ಲಿ ನಮ್ಮ *ಸ್ಥಾನವನ್ನು* ಕ್ರಿಸ್ತನಲ್ಲಿ *ಸ್ಥಿತಿಯನ್ನು* ಹೋಲಿಸಿರಿ.
12. ನಾವು "ಕ್ರಿಸ್ತನಲ್ಲಿ" ಇರುವೆವೆಂದು ನಾವು ಹೇಗೆ ಭರವಸೆಯುಳ್ಳವರಾಗಿರುವೆವು?

© 2009 Truth for Today